ಪ್ರಬಂಧ

# ರಾಮನಾಮ ಪಾಯಸ

■ ಎಸ್.ಆರ್. ವಿಜಯಶಂಕರ
ಕಲೆ: ಸಂತೋಷ್ ಸಸಿಹಿತ್ಲು



ಜಾಗತಿಕ ದಾಖಲೆಗಳ ಪ್ರಕಾರ ಅತಿ ಹೆಚ್ಚಿನ ಜನರಿಗಿರುವ ಏಕಮಾತ್ರ ಹೆಸರು 'ಮಹಮ್ಮದ್'. ಜಗತ್ತಿನ ನಾಮಧೇಯಗಳ ದಾಖಲೆ ಹೇಗೇ ಇದ್ದರೂ, ಭಾರತದಲ್ಲಂತೂ ರಾಮ–ನಾಮವೇ ಪಾಯಸ. ಶಾಸ್ತ್ರೋಕ್ತ ನಾಮಕರಣವಾಗಿರಲಿ ಅಥವಾ ಆಗದಿರಲಿ, 'ರಾಮ' ಎಂಬ ಹೆಸರೇ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವುದು ಎಂದು ನನ್ನ ನಂಬಿಕೆ. ಸಾರ್ವಜನಿಕವಾಗಿ ಇಂದು ಸಮಾಜವನ್ನು ನೈತಿಕವಾಗಿ ಮುನ್ನಡೆಸಲು ಬಯಸುವ ಧಾರ್ಮಿಕರ ಸ್ವಯಂ ಪೊಲೀಸ್ ಪಾತಗಳ ರಂಪಾಟಗಳನ್ನು ನೋಡಿದರೆ ಭಜರಂಗಿಗಳೇ ಹೆಚ್ಚಿರಬಹುದೆಂಬ ಅನುಮಾನ ಉಂಟಾಗುವುದಿಲ್ಲವೆ ಎಂದು ನನ್ನ ಸ್ನೇಹಿತರಾದ ಪ್ರೊಫೆಸರ್ ಹನುಮಂತರಾವ್ ಇತ್ತೀಚೆಗೆ ಭಾನುವಾರ ಬೆಳಗಿನ ವಾಕಿಂಗ್ ಸಮಯದಲ್ಲಿ ಕೇಳಿದ್ದರು. ಆಗ ನಾನು ಬಹಳ ಸಮಾಧಾನದಲ್ಲಿ ಹೇಳಿದ್ದು: ''ನೋಡಿ ರಾಯರೆ, ನನ್ನ ಕಾಲೆಳೆಯುವ ನಿಮ್ಮ ಕಳ್ಳ ಪ್ರಶ್ನೆ ಹಾಗಿರಲಿ, ರಾಮ, ರಾಮಪ್ಪ, ರಾಮಣ್ಣ, ರಾಮು, ರಾಂ, ರಾಂಭಾವ, ರಾಂಮಾವ, ರಾಂಪ್ಪಚ್ಚಿ – ಹೀಗೆ ನಾಮವಾಚಕ, ಸಂಬಂಧವಾಚಕಗಳನ್ನೆಲ್ಲಾ ಸೇರಿಸಿದರೆ ನಮ್ಮ ದೇಶದ ಒಟ್ಟು ಗಂಡಸರ ಸಂಖ್ಯೆಯಷ್ಟೇ ರಾಮ ನಾಮಕರಣವಾದೀತು. ರಾಮನಾಮ ಪಾಯಸಕ್ಕೇನೋ ದಾಸರು ಕೃಷ್ಣನಾಮ ಸಕ್ಕರೆ ವಿಠಲ ನಾಮ ತುಪ್ಪ ಬೆರೆಸಿ ಬಾಯಿ ಚಪ್ಪರಿಸಿದರು. ಆದರೆ ಸಂಸ್ಕೃತ ಓದದೆಯೂ ಸಂಸ್ಕೃತ ಭಾವವನ್ನರಿಯಬಲ್ಲ ನಮ್ಮ ಜನರಿಗೆ 'ರಮತೇ ಇತಿ ರಾಮಃ' ಎಂಬುದು ತಿಳಿದಿದೆ. ರಾಮ ಎಂದರೆ ಆಹ್ಲಾದ, ಸಂತೋಷ ನೀಡುವ ಸುಂದರ ಎಂಬ ಅರ್ಥವಿಲ್ಲವೇ? ಹಾಗಾಗಿ ನಮ್ಮಲ್ಲಿ ರಾಮಸುಂದರ, ಸುಂದರರಾಮ ಎಲ್ಲರೂ ಇದ್ದಾರೆ.''

ನನ್ನ ಅಂಕಿ–ಸಂಖ್ಯೆಯ ಅಧಿಕೃತತೆಯನ್ನು ದಾಸರೂಪಕಗಳ ಸೂಕ್ಷ್ಮತೆಯನ್ನು ಪ್ರಶ್ನಿಸದೆ ರಾಯರು ಕೇಳಿದ್ದು – ''ಅದೆಂತದು, ರಾಂಪ್ಪಚ್ಚಿ.'' ನಾನೆಂದೆ, "ಬಹಳ ಸಿಂಪಲ್. ರಾಮ ಅಪ್ಪಚ್ಚಿ. ಹವಿಗನ್ನಡದಲ್ಲಿ ಅಪ್ಪಚ್ಚಿ ಎಂದರೆ ಚಿಕ್ಕಪ್ಪ."

ಶ್ರೀರಾಮ, ಕೀರ್ತನರಾಮ, ವೆಂಕಟರಾಮ, ಶಿವರಾಮ, ರಾಮಪ್ರಸಾದ, ರಾಮಕೃಷ್ಣ – ಹೀಗೆ ಯಾವುದೇ ದೇವರ ಹೆಸರು, ಪೂಜಾ ವಿಶೇಷತೆ, ಯಾವುದಕ್ಕೆ ಬೇಕಾದರೂ 'ರಾಮ' ಹೆಸರನ್ನು ಸೇರಿಸಬಹುದು. ಅಷ್ಟು ಸುಲಭನೋ ಹರಿ. ಅವ ಮಲಗಿ ಪಾಡಲು ಕುಳಿತು ಕೇಳುವ, ಕುಳಿತರೆ ನಿಲುವ, ನಿಂತರೆ ನಲಿವವ ಮಾತ್ರವಲ್ಲ, ಯಾವ ಹೆಸರಿಗೆ ಸೇರಿಸಿದರೂ ಸಂತೋಷ ಪಡುವವ. ಅದಕ್ಕೇ ಇರಬೇಕು, ಸಾತ್ವಿಕರಾಮ, ಜಗಜ್ಜೀವನ ರಾಮ, ಮೋಹನ ರಾಮ ಮಾತ್ರವಲ್ಲ, ಓಂರಾಂ ಎಂಬ ಹೆಸರೂ ಇದೆಯಲ್ಲ ಎಂದೆ. ದೇವರ ಹೆಸರುಗಳ ಮೊದಲಿಗೆ ಇರುವುದೇ ಅವರ ಪತ್ನಿಯರ ಹೆಸರಲ್ಲವೇ? ಜಾನಕಿರಾಮ, ಸೀತಾರಾಮ ಎಂದೂ ಸೇರಿಸಿದೆ.

ಕಳೆದ ಭಾನುವಾರ ಹೀಗೆ ಮಾತನಾಡುತ್ತಾ ವಾಕಿಂಗ್ ಮಾಡುತ್ತಿದ್ದ ನನಗೆ, ರಾಮನೊಡನೆ ಸೀತೆಯ ಹೆಸರು ಬಂದಾಗ ಕನ್ನಡ ಕವಿ ವಿ.ಜಿ. ಭಟ್ಟರ 'ಸೀತಾ ಪರಿತ್ಯಾಗ' ಎಂಬ ಕಿರುಕವನದ ಕೆಳಗಿನ ಸಾಲುಗಳು ನೆನಪಾದವು:

ಪತಿಯ ಮನದಿ ಬೆಳೆಯೆ ಸವತಿ
ತನ್ನ ಬಸಿರ ಜೋಡಿಗೆ
ಪತಿಯ ಬೆನ್ನ ಬಿಡದ ಹೆಣ್ಣು ಹೋಗಬೇಕು ಕಾಡಿಗೆ.

ವಿ.ಜಿ. ಭಟ್ಟರ ಹಾಸ್ಯದ ಲಿಮರಿಕ್ಕುಗಳು ಹೇಗೇ ಇರಲಿ, ನಮ್ಮ ಕವಿಕುಲಗುರು ಕಾಳಿದಾಸನಂತೂ ಅದನ್ನು ಬಹು ಗಂಭೀರವಾಗಿ ಅರ್ಥಗರ್ಭಿತವಾಗಿ ಕಾಣಿಸಿದ್ದಾನೆ. ಅಲಂಕಾರ ಶಾಸ್ತ್ರದ ಪ್ರಸಿದ್ಧ ಗ್ರಂಥ 'ವಕ್ರೋಕ್ತಿ ಜೀವಿತ'ದಲ್ಲಿ ಕಾವ್ಯ ವಕ್ರತೆ ಪಡೆಯಬಹುದಾದ ಸಹಸ್ರ ವಿಧಗಳ ಅಭಿವ್ಯಕ್ತಿಗಾಗಿ ಕುಂತಕನು ಕೊಡುವ ಉದಾಹರಣೆಯೂ ಅದೇ ಆಗಿದೆ. 'ರಘುವಂಶ' ಕಾವ್ಯದ 14ನೇ ಸರ್ಗದಲ್ಲಿ ತನ್ನನ್ನು ಕಾಡಿನಲ್ಲಿ ಬಿಡಲು ಬಂದ ಲಕ್ಷ್ಮಣನ ಬಳಿ ಸೀತೆ 'ಉಪಸ್ಥಿತಾಂ ಪೂರ್ವಮಪಾಸ್ಯ ಲಕ್ಷ್ಮೀಂ ವನಂ ಮಯಾ ಸಾರ್ಧಮಸಿ ಪ್ರಸನ್ನಃ' ಎಂಬ ಶ್ಲೋಕದಲ್ಲಿ ಹೇಳುವುದು: ''ಹಿಂದೆ ರಾಜ್ಯಲಕ್ಷ್ಮಿಯಿಂದ ಬಿಡಿಸಿ ರಾಮನೊಂದಿಗೆ ನಾನು ಕಾಡಿಗೆ ಹೋದೆ. ಈಗ ಅವನ ಭವನದಲ್ಲಿ ರಾಜ್ಯಲಕ್ಷ್ಮಿ ಸೇರಿಕೊಂಡು ಸೇಡಿನಿಂದ ನನ್ನನ್ನು ಕಾಡಿಗೆ ಅಟ್ಟಿಸುತ್ತಿದ್ದಾಳೆ." ಅಂದರೆ ನಮ್ಮ ಸೀತೆಯ ಮನೋಭಾವ ನಮ್ಮ ಕನ್ನಡ ಕವಿ ಲಕ್ಷ್ಮೀಶ ಹೇಳಿದಂತೆ: 'ಕರುಣಾಳು ರಾಘವನಲಿ ತಪ್ಪಿಲ್ಲ.'

ಇದನ್ನು ಕೇಳಿದ ಪ್ರೊಫೆಸರ್ ಹ.ರಾ.ರು ನನ್ನ ಬಳಿ, "ಜೋಕೆ ಇದನ್ನೆಲ್ಲಿಯಾದರೂ ನೀವು ಸ್ತ್ರೀವಾದಿ ಚಿಂತಕಿಯರ ಎದುರು ಉಲ್ಲೇಖಿಸಿದರೆ ಅಪಾಯ ತಪ್ಪಿದ್ದಲ್ಲ" ಎಂದು ಎಚ್ಚರಿಸಿದರು. ನಾನು ಪ್ರೊ. ಹನುಮಂತ ರಾಯರ ಬಳಿ, ಯಾಕೆ ನಾನು ಲಕ್ಷ್ಮೀಶ, ಕಾಳಿದಾಸರ ಕತೆ ಹೇಳಲಿ ಅಥವಾ ಸಮರ್ಥನೆಗೆ ಆರ್ಶಿಯಾ ಸತ್ತಾರ್ ಅಥವಾ ವೆಂಡಿದೊನಿಗರ್ ಅಂತವರನ್ನು ಆಶ್ರಯಿಸಲಿ? ಮನೆಯಲ್ಲಿ ನನ್ನ ಅಜ್ಜನ ಕತೆಯೇ ಒಂದಿದೆ. ಅದನ್ನೇ ಹೇಳುವೆ ಎಂದೆ. ರಾಯರಿಗೆ ಅದೇನೆಂದು ಕುತೂಹಲ ಹುಟ್ಟಿದ್ದರಿಂದ ಅಜ್ಜನ ಕತೆ ಹೇಳಿದೆ.

ಮನೆಯಲ್ಲಿ ಅಜ್ಜ ಮಹಾದ್ಯೆವ ಭಕ್ತರು. ಮಧ್ಯಾಹ್ನ ಪೂಜೆ ಬಳಿಕ ದೇವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಶ್ರೀರಾಮಚಂದ್ರ ಕಾಪಾಡಪ್ಪ ಎಂದು ಮಡದಿ, ಮಕ್ಕಳು ಮೊಮ್ಮಕ್ಕಳಿಗೆಲ್ಲಾ ಕೇಳುವಂತೆ ಹೇಳಿ, ತೀರ್ಥ ತೆಗೆದುಕೊಂಡು, ಪ್ರಸಾದ ರೂಪದಲ್ಲಿ ತಲೆಗೆ ಹೂ ಮುಡಿದರೆಂದರೆ ಅವರ ನಿತ್ಯ ಪೂಜೆ ಮುಗಿಯಿತು ಎಂದು ಲೆಕ್ಕ. ಆಮೇಲೆ ಅವರು ರಾಮ, ರಾಮ, ರಾಮಾ ಶ್ರೀರಾಮ ಎಂದು